Regularising the Services of Gangmen Working in Public Works Department

597 SRI M. C. BASAPPA (Chamarajanagar).—Will the Minister for Public Works be pleased to state :—

(a) whether it is not a fact that Hon'ble Minister has made a statement that the services of Gangmen working in Public Works Department will be regularised ;

(b) if so, the steps initiated so far in that directions ;

(c) the time required to complete the same ?

SRI S. BANGARAPPA (Minister for Public Works).—

(a) Yes. It is a fact.

(b) Special rules under Article 309 of the Constitution are being framed to regularise their services.

(c) As early as possible.

ಶ್ರೀ ಎಂ.ಸಿ. ಬಸಪ್ಪ.—ನನ್ನ (ಆ) ಪ್ರಶ್ನೆಗೆ ಉತ್ತರವಾಗಿ, ಅವರ ಸೇವೆಗಳನ್ನು ಕ್ರಮಗೊಳಿಸಲು ಸಂವಿಧಾನದ ೩೦೯ನೇ ಅನುಚ್ಛೇದದ ಮೇರೆಗೆ ವಿಶೇಷ ನಿಯಮಗಳನ್ನು ರಚಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಹಾಲಿ ಇರತಕ್ಕ ರೂಲ್ಸ್ ಕೆಳಗೆ ಗ್ಯಾಂಗ್‌ಮ್ಯಾನ್‌ಗಳನ್ನು ಖಾಯಂ ದರ್ಜೆ ನೌಕರರು ಎಂದು ಪರಿಗಣಿಸುವುದಾಗಿ ಹೇಳಿದ್ದೀರಿ. ಆ ಪ್ರಕಾರ ಖಾಯಂಗೊಳಿಸಲಾವುದಕ್ಕೆ ಸಾಧ್ಯವಾಗುವುದಿಲ್ಲವೆ?

† ಶ್ರೀ ಎಸ್. ಬಂಗಾರಪ್ಪ.—ಆ ರೀತಿಯೇ ಮಾಡಬೇಕೆಂಬ ಅಭಿಪ್ರಾಯವನ್ನು ನಾವು ಹೊಂದಿದ್ದೇವು. ಆದರೆ, ಈ ಮಧ್ಯೆ ಹೈಕೋರ್ಟ್ ಜಡ್ಜ್‌ಮೆಂಟ್ಸ್, ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಕೆಲವು ಅವಾರ್ಡ್ಸ್ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಬಂದಿವೆ. ಆದ್ದರಿಂದ ಅದನ್ನು ಕೂಡ ನೋಡಿ ಮಾಡಬೇಕೆಂದಿದ್ದೇವೆ. ಸುಮಾರು ೧೦ ವರ್ಷಗಳಿಂದ ಡೈಲಿ ವೇಜಸ್‌ನಲ್ಲಿ ಕೆಲಸ ಮಾಡುತ್ತಿರುವವರಿಗೆ ಎಕ್ಸಿಸ್ಟಿಂಗ್ ರೂಲ್ಸ್ ಪ್ರಕಾರ ಯಾವ ರೀತಿ ಮಾಡಬೇಕೆಂಬುದನ್ನು ನೋಡಿ ಮಾಡುತ್ತಿದ್ದೇವೆ.

ಶ್ರೀ ಎಂ.ಸಿ. ಬಸಪ್ಪ.—ಈ ಬಗ್ಗೆ ಆಶ್ವಾಸನೆ ಕೊಟ್ಟದ್ದು ಕಳೆದ ಅಧಿವೇಶನದಲ್ಲಿ. ನಿಯಮಗಳನ್ನು ರಚಿಸಲಾಗುತ್ತಿದೆ ಎಂದು ಹೇಳುತ್ತಿದ್ದೀರಲ್ಲ, what is the progress you have achieved so far? Are you going to finalise shortly or when will you finalise it?

ಶ್ರೀ ಎಸ್. ಬಂಗಾರಪ್ಪ.—ಅದನ್ನು ಅತಿ ಶೀಘ್ರವಾಗಿ ಮಾಡಬೇಕೆಂದು ತೀರ್ಮಾನಿಸಿದ್ದೆವು. ಕಳೆದ ಅಧಿವೇಶನದಲ್ಲಿ ಈ ವಿಷಯವನ್ನು ಪ್ರಕಟಿಸಿದ ಮೇಲೆ, ನೀರಾವರಿ ಇಲಾಖೆ, ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಇಲಾಖೆ, ಬಿಲ್ಡಿಂಗ್ ಆಂಡ್ ಕಮ್ಯುನಿಕೇಷನ್, ಮೈನರ್ ಇರಿಗೇಷನ್ ಈ ಎಲ್ಲ ಇಲಾಖೆಗಳಿಂದ ಎಲ್ಲ ಅಂಕಿ ಅಂಶಗಳನ್ನು ತರಿಸಬೇಕಾಯಿತು. ಅಲ್ಲಿ ವರ್ಕ್ ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿದ್ದವರು ಕೆಲವರು ಬಿಟ್ಟುಹೋಗಿರತಕ್ಕವರಿದ್ದರು. ಅವರ ಹೆಸರುಗಳಲ್ಲಿ ವ್ಯತ್ಯಾಸ ಇತ್ತು. ನಾಳೆ ದಿವಸ ತಕರಾರು ಬರಬಾರದೆಂಬ ದೃಷ್ಟಿಯಿಂದ ಅವನ್ನೆಲ್ಲ ಪತ್ತೆ ಹಚ್ಚಿ ಕಳುಹಿಸುವುದು ಸ್ವಲ್ಪ ತಡವಾಗಿದೆ. ಒಟ್ಟಿನಲ್ಲಿ, ಎಲ್ಲ ಅಂಕಿ ಅಂಶಗಳನ್ನು ತರಿಸಿದ್ದೇವೆ. ಅದಕ್ಕೆ ಹಣಕಾಸಿನ ಇಲಾಖೆಯವರು ಒಪ್ಪಿದ್ದಾರೆ, ಈಗ ಅದು ಕಾನೂನು ಇಲಾಖೆಯಲ್ಲಿ ಇದೆ, ಇನ್ನು ಒಂದೆರಡು ತಿಂಗಳೊಳಗಾಗಿ ಫೈನಲೈಸ್ ಮಾಡುವುದಕ್ಕೆ ಸಾಧ್ಯವಾಗಬಹುದು.

ಶ್ರೀ ಎಂ.ಸಿ. ಬಸಪ್ಪ.—ಕಳೆದ ಅಧಿವೇಶನದಲ್ಲಿ ಉತ್ತರಿಸುತ್ತಾ ಹೇಳಿದಿರಿ, ಇನ್ನು ೫ ವರ್ಷಗಳಲ್ಲಿ ಅವರ ಸೇವೆಯನ್ನು ಖಾಯಂಗೊಳಿಸುತ್ತೇವೆ ಎಂದು ವರ್ಷಕ್ಕೆ ಐದನೇ ಒಂದು ಭಾಗದಂತೆ ೨೦ ವರ್ಷಗಳಿಗಿಂತಲೂ ಹೆಚ್ಚು ಸೇವೆ ಸಲ್ಲಿಸಿದಂತವರು ಇದ್ದರೆ ಅವರನ್ನು ಮೊದಲು ಖಾಯಂಗೊಳಿಸುತ್ತೇವೆಂದು ಹೇಳಿದ್ದೀರಿ. ಈಗ ಇನ್ನೂ ತಮ್ಮ ವಿಶೇಷ ನಿಯಮಗಳು ಆಗಿಲ್ಲ. ಅಷ್ಟರಲ್ಲಿ ಕೆಲವರು ನಿವೃತ್ತರಾಗ ಬಹುದು, ಆದ್ದರಿಂದ ಅಂಥವರಿಗೆಲ್ಲ ವಿನಿಮಂ ರಿಲೀಫ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿರಾ?

ಶ್ರೀ ಎಸ್. ಬಂಗಾರಪ್ಪ.—ಅವರ ಸೇವೆಯನ್ನು ಕಾನೂನು ಪ್ರಕಾರ ಕ್ರಮಗೊಳಿಸುವವರೆಗೆ ಈಗಿರುವ ನಿಯಮಗಳ ಪ್ರಕಾರ ಏನೇನು ಲಭ್ಯವಾಗುತ್ತದೋ ಅಷ್ಟನ್ನು ನೀಡಬೇಕಾಗುತ್ತದೆ. ಮುಂದೆ ನಿಯಮಗಳನ್ನು ಮಾಡಿ ಖಾಯಂಗೊಳಿಸತಕ್ಕ ಆಜ್ಞೆ ಹೊರಡುವುದಕ್ಕೆ ಮೊದಲು ಏನಾದರೂ ರಿಟೈರ್ ಆದರೆ ಅಂಥವರಿಗೆ ಏನೂ ಮಾಡುವುದಕ್ಕಾಗುವುದಿಲ್ಲ ಎಂಬುದು ತಮಗೂ ಗೊತ್ತಿದೆ. ಆ ರೀತಿ ಆಗ ಬಾರದೆಂದೇ ಶೀಘ್ರಗತಿಯಲ್ಲಿ ಮಾಡಬೇಕೆಂದು ಮಾಡುತ್ತಿದ್ದೇವೆ. ಅದಕ್ಕೋಸ್ಕರವೇ ೫ ವರ್ಷ ಕಾಲವನ್ನು ನಿಗದಿ ಮಾಡಿದ್ದೇವೆ ಮತ್ತು ಅದೇರೀತಿ ನಿಯಮಗಳನ್ನು ಮಾಡುತ್ತಿದ್ದೇವೆ.

SRI G. B. SHANKAR RAO.— They are not regular employees of the department. If the Government have to treat them as regular salaried servants and make them eligible for pension, what would be the additional burden on the exchequer by way of salary and pension and what is the total number of gangmen ?

SRI S. BANGARAPPA.— There are two sets of people who work in the department. The persons working in the work-charged establishment number about 13.0 0 ; the number of persons working as gangmen is 11,000 : total number is 24,000. So far as gangmen are concerned the financial burden is Rs. 2½ crores and as far as work-charged establishment is concerned there is no trouble because we have been paying their salaries and not much of financial burden. That is why we thought of regularising their services within a period of five years so that financial implication will not be there in one year.

Taking over Mysore Electrical Industries Ltd

637. SRI S.M.SHEERNALY CHANDRASEKHAR (Hosanagar). –Will the Minister for Industries and Commerce be pleased to state.—

(a) whether the Government intend to take over the Mysore Electrical Industries Ltd. ;

(b) whether it has come to the notice of Government that the Central Government has refused to take over the same under Industrial Development and Regulation Act ;

(c) if so, whether the reasons are known to the Govt. about their refusal ?

SRI AZEEZ SAIT (Minister for Industries and Commerce)—(a) By an Ordinance promulgated by the Governor of Karnataka the majority